# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 356 |
| ಸದಸ್ಯರ ಹೆಸರು | : | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11.12.2024 (ಕಂದಾಯ ಇಲಾಖೆಯಿಂದ ವರ್ಗಾವಣೆಗೊಂಡಿರುತ್ತದೆ) |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | 1965-66 ರಿಂದ ಕಲಬುರಗಿ ಸೇಡಂ ರಸ್ತೆಯ ಬಡೇಪುರ ಗ್ರಾಮದಲ್ಲಿರುವ ಸರ್ವೆ ನಂ.81, 82ರ ಜಮೀನುಗಳ ಇತ್ತೀಚಿನ ಪ್ರಗತಿ ಕುರಿತು ವಿವರವಾದ ಮಾಹಿತಿ ನೀಡುವುದು; | 1. ಸಹಾಯಕ ಆಯುಕ್ತರು ಹಾಗೂ ಭೂಸ್ವಾಧೀನಾಧಿಕಾರಿಗಳು, ಗುಲಬರ್ಗಾ ರವರ ಐ ತೀರ್ಪಿನ ಸಂಖ್ಯೆ 1707/LAQ/1964-65 ದಿನಾಂಕ 09.11.1967 ಬಡೇಪೂರು ಗ್ರಾಮದ ಸರ್ವೇ ನಂ 81 ಮತ್ತು 82 ರ ಒಟ್ಟು ವಿಸ್ತೀರ್ಣ 09 ಎಕರೆ 09 ಗುಂಟೆ ಜಮೀನನ್ನು "Development Scheme" ಸಲುವಾಗಿ ಪಾಲಿಕೆಯಿಂದ ಭೂಸ್ವಾಧಿನ ಪಡಿಸಿಕೊಂಡು ಬಡಾವಣೆ ನಿರ್ಮಾಣ ಮಾಡಿ, ಸದರಿ ಸರ್ವೇ ನಂಬರಗಳಲ್ಲಿ ನಿವೇಶನಗಳನ್ನು ರಚಿಸಿ, ಹಂಚಿಕೆ ಮಾಡಲಾಗಿರುತ್ತದೆ.<br><br>2. ಬಡೇಪೂರು ಗ್ರಾಮದ ಸರ್ವೇ ನಂ 81 ರಲ್ಲಿನ 2ನೇ ಹಿಸ್ಸಾ ಪಹಣಿ ಪತ್ರಿಕೆಯಲ್ಲಿ 1984 ರಿಂದ ಹಳೆಯ ಭೂ ಮಾಲೀಕರು ಗಾಳೆಪ್ಪಾ ತಂ ಬಂಡೆಪ್ಪಾ ಹೆಸರು ಮುಂದುವರೆದ ಕಾರಣ, ಸದರಿ ಸರ್ವೇ ನಂ 81/2 ರಲ್ಲಿನ ಒಟ್ಟು ವಿಸ್ತೀರ್ಣ 01 ಎಕರೆ 23 ಗುಂಟೆಯ ಮಾಲೀಕತ್ವದ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: RSA 1961/2005 ದಾಖಲಾಗಿರುತ್ತದೆ. ಸದರಿ ಪ್ರಕರಣವು ದಿನಾಂಕ:31.01.2008 ರಂದು ಇತ್ಯರ್ಥವಾಗಿ ಪಾಲಿಕೆಯ ನಿವೇಶನ ಹಂಚಿಕೆದಾರರ ಪರವಾಗಿರುತ್ತದೆ.<br><br>ಅಪರ ಜಿಲ್ಲಾಧಿಕಾರಿಗಳು ಸದರಿ ಪಹಣಿಯಲ್ಲಿ ಮಹಾನಗರ ಪಾಲಿಕೆ, ಕಲಬುರಗಿ ಹೆಸರು ನೊಂದಾಯಿಸುವಂತೆ ಸಹಾಯಕ ಆಯುಕ್ತರಿಗೆ ನಿರ್ದೇಶನ ನೀಡಿರುತ್ತಾರೆ. ಪ್ರಸ್ತುತ ಪಹಣಿಯಲ್ಲಿ ಮಹಾನಗರ ಪಾಲಿಕೆಯ ಹೆಸರಿರುತ್ತದೆ.<br><br>3. ಬಡೆಪೂರು ಗ್ರಾಮದಲ್ಲಿ ಸರ್ವೇ ನಂ.81/2 ರ ಜಮೀನಿನಲ್ಲಿ ಅಬ್ದುಲ್ ಫಹೀಮ್ ಎನ್ನುವವರು ತಪ್ಪು ದಾಖಲೆಗಳನ್ನು ಪಾಲಿಕೆಗೆ ಸಲ್ಲಿಸಿ ಖಾತೆ |
| ಆ) | ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಮಹಾನಗರ ಪಾಲಿಕೆಯ ಕ್ರಮವೇನು? (ಸಂಪೂರ್ಣ ವಿವರ ನೀಡುವುದು) | |

| | | |
|---|---|---|
| | | ಮಾಡಿಕೊಂಡಿರುವುದಾಗಿ ದೂರು ಸಲ್ಲಿಕೆಯಾಗಿರುವುದರಿಂದ ಸದರಿ ಪ್ರಕರಣದ ಕುರಿತು ತನಿಖೆ ಕೈಗೊಂಡು ವರದಿ ಸಲ್ಲಿಸಲು ಪಾಲಿಕೆಯಿಂದ ಕಂದಾಯ ಅಧಿಕಾರಿಗೆ ನಿರ್ದೇಶಿಸಲಾಗಿರುತ್ತದೆ.<br><br>ಕಂದಾಯಾಧಿಕಾರಿಯು ಸಲ್ಲಿಸಿರುವ ವರದಿಯನ್ವಯ ತಾತ್ಕಾಲಿಕವಾಗಿ ಖಾತೆಗಳನ್ನು ಬ್ಲಾಕ್ ಮಾಡಲಾಗಿರುತ್ತದೆ. ವಿಚಾರಣೆ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ವಿಚಾರಣೆ ಮುಕ್ತಾಯಗೊಂಡ ನಂತರ ಮುಂದಿನ ಅಗತ್ಯ ಕ್ರಮವಹಿಸಲಾಗುವುದು.<br><br>4. ಸದರಿ ಮಾಲೀಕತ್ವದ ಕುರಿತು ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠ ದಲ್ಲಿ ರಿಟ್ ಅರ್ಜಿ ಸಂಖ್ಯೆ: 201898/2021 ದಾಖಲಾಗಿದ್ದು, ಸದರಿ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುತ್ತದೆ.<br><br>5. ಸರ್ವೇ ನಂ 82 ಕುರಿತಾಗಿ ಯಾವುದೇ ದೂರುಗಳು ಪಾಲಿಕೆಗೆ ಸ್ವೀಕೃತವಾಗಿರುವುದಿಲ್ಲ |

**ಸಂಖ್ಯೆ: ನಅಇ 95 ಎಸಿಜಿ 2024 (ಇ)**

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು